# Sanjay Memorial Polytechnic

(Approved by A.I.C.T.E., New – Delhi, and running with Grant – in – aid of State Govt. of Karnataka)

Ikkeri Road, Sagar- 577 401, Shimoga Dist., Karnataka
Phone: 08183 - 226034


## ಪರೀಕ್ಷಾ ಕೇಂದ್ರಗಳ ವಿದ್ಯಾರ್ಥಿಗಳು ಅನುಸರಿಸಬೇಕಾದ ಪ್ರಮಾಣಿತ ಕಾರ್ಯನಿರ್ವಹಣಾ ಕ್ರಮಗಳು

## (Standard Operating Procedure)

1. ವಿದ್ಯಾರ್ಥಿಗಳು ಥರ್ಮಲ್ ಚೆಕ್ ಹ್ಯಾಂಡ್ ಸ್ಯಾನಿಟೈಜೇಷನ್ ಮತ್ತು ಕನಿಷ್ಠ ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆಗಳಿಗೆ ಅನುವು ಮಾಡಿಕೊಡಲು . ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ 1.00 ಗಂಟೆಯ ಮುನ್ನ ಸಂಸ್ಥೆಯಲ್ಲಿ ಹಾಜರಿರುವುದು ಕಡ್ಡಾಯವಾಗಿರುತ್ತದೆ.
2. ವಿದ್ಯಾರ್ಥಿಗಳು ತಮ್ಮ ಕಾಲೇಜು ಐಡಿ ಮತ್ತು ಹಾಲ್ ಟಿಕೆಟ್‌ಗಳನ್ನು ಸದಾಕಾಲ ತಮ್ಮ ಬಳಿಯಿಟ್ಟಕೊಂಡು ನಿರ್ಬಂಧಿತ ಸ್ಥಳಗಳಲ್ಲಿ ಓಡಾಡುವಾಗ ಪಾಸ್ ರೀತಿ ಬಳಸಬಹುದಾಗಿದೆ.
3. ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಸದಾಕಾಲ ಎಲ್ಲಾ ಸ್ಥಳಗಳಲ್ಲೂ ಮುಖಗವಸು ಮತ್ತು ಕೈಗವಸುಗಳನ್ನು ಧರಿಸುವುದು. ಸ್ವಂತ ಬಳಕೆಗಾಗಿ ಹ್ಯಾಂಡ್ ಸ್ಯಾನಿಟೈಜರ್ ಬಾಟಲಿ ತರುವುದು ಕಡ್ಡಾಯ. ಡ್ರಾಯಿಂಗ್ ಉಪಕರಣಗಳು. ಕ್ಯಾಲ್ಕುಲೇಟರ್ ಇತರೆ ಪರಿಕರಗಳ ಜೊತೆಗೆ ಅವಶ್ಯಕತೆ ಇದ್ದಲ್ಲಿ ಕುಡಿಯುವ ನೀರಿನ ಬಾಟಲಿ ತರಬಹುದಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರ/ಕೊಠಡಿಗಳಲ್ಲಿ ಮೇಲ್ಕಂಡ ಯಾವುದೇ ಸಾಮಾಗ್ರಿ/ಪರಿಕರಗಳನ್ನು ಪರಸ್ಪರ ಹಂಚಿಕೊಳ್ಳುವುದು ನಿಷಿದ್ಧ.
4. ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರಗಳಲ್ಲಿನ ದ್ವಾರಗಳು/ಕ್ಯಾಂಟಿನ್/ಹ್ಯಾಂಡ್ ಸ್ಯಾನಿಟೈಜರ್ ಯಂತ್ರ/ಶೌಚಾಲಯಗಳ ಹತ್ತಿರ ಜನಸಂದಣಿಯಾಗದಂತೆ ಕನಿಷ್ಠ 1.0 ಮೀಟರ್ ಅಂತರದ ಗುರುತಿನಲ್ಲಿ ಒಬ್ಬೋಬ್ಬರಾಗಿ ಹೋಗುವಂತೆ ನೋಡಿಕೊಂಡು ಸದಾಕಾಲ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಜನದಟ್ಟಣೆಯಾಗದಂತೆ ಸದ್ವರ್ತನೆಯಿಂದ ನಡೆದುಕೊಳ್ಳುವುದು.
5. ಯಾವುದೇ ವಿದ್ಯಾರ್ಥಿ Covid-19 Positive ಆಗಿದ್ದಲ್ಲಿ ಅಥವಾ ಜ್ವರ ಕೆಮ್ಮು& ಶೀತ ರೋಗ ಲಕ್ಷಣಗಳಿಂದ ಬಳಲುತ್ತಿದ್ದರೆ ತಮ್ಮ ಸಹಪಾಠಿಗಳ ಸುರಕ್ಷತೆಯ ದೃಷ್ಟಿಯಿಂದ ಪರೀಕ್ಷೆ ಬರೆಯಲು ಪ್ರತ್ಯೇಕ ಕೊಠಡಿ ವ್ಯವಸ್ಥೆಗಾಗಿ ಕನಿಷ್ಠ 2 ದಿನ ಮುಂಚಿತವಾಗಿ ಸಂಸ್ಥೆಯ ಪ್ರಾಂಶುಪಾಲರು / ಮುಖ್ಯ ಅಧೀಕ್ಷಕರಿಗೆ ಮನವಿ ನೀಡುವುದು. Covid-19 Positive ಎಂದು ವರದಿ ಪರೀಕ್ಷಾ ಸಮಯಕ್ಕೆ ಮೊದಲು ಬಂದಲ್ಲಿ ಸಾದ್ಯವಾದಷ್ಟು ಶೀಘ್ರವಾಗಿ ವರದಿ ಪ್ರಮಾಣ ಪತ್ರವನ್ನು ಸಂಸ್ಥೆಯ ಪ್ರಾಂಶುಪಾಲರಿಗೆ ಸಲ್ಲಿಸುವುದು.
6. 6ನೇ ಸೇಮಿಸ್ಟರ್ ವಿದ್ಯಾರ್ಥಿಗಳು ಅವರ ರೆಗ್ಯುಲರ್ ವಿಷಯಗಳಿಗೆ ಹಾಗೂ ಬಾಕಿ ಉಳಿಸಿಕೊಂಡಿರುವ ವಿಷಯಗಳಿಗೆ ಪರೀಕ್ಷೆ ಬರೆಯುವುದು.
7. 2 & 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು ತಮ್ಮ ಬಾಕಿ ಉಳಿಸಿಕೊಂಡಿರುವ ವಿಷಯಗಳಿಗೆ ಪರೀಕ್ಷೆ ಬರೆಯುವುದು.
8. ಪರೀಕ್ಷಾ ರೂಂ ಅಲಾಟ್‌ಮೆಂಟ್ ಬಗ್ಗೆ ವಿದ್ಯಾರ್ಥಿಗಳಿಗೆ ಒಂದು ದಿನ ಮುಂಚಿತವಾಗಿ ತಿಳಿಸಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಗುಂಪಾಗಿ ಸೇರುವ ಬದಲು ಅವರವರ ಕೊಠಡಿಗೆ ನೇರವಾಗಿ ಹೋಗಿ ಕುಳಿತುಕೊಳ್ಳತಕ್ಕದ್ದು.